**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**
**ಸಿಸಿ ನಂಬರ : 877/2022**

| | | | |
|---|---|---|---|
| ಸಾಕ್ಷಿಯ ಹೆಸರು | : ಕೃಷ್ಣಾ ನಾಯ್ಕ | | ಸಿ.ಡಬ್ಲ್ಯು 15 |
| ತಂದೆಯ ಹೆಸರು | : ಖಂಡ್ಯಾ ನಾಯ್ಕ | | ಪಿ.ಡಬ್ಲ್ಯು 4 |
| ವಯಸ್ಸು | : 39 ವರ್ಷ | | |
| ಉದ್ಯೋಗ | : ಪಿ ಎಸ್ ಐ ತರೀಕೆರೆ | | |
| ವಾಸ ಸ್ಥಳ | : ತರೀಕೆರೆ | | |

**ದಿನಾಂಕ: 17-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-</u>**

ನಾನು ಕಳೆದ ಎರಡು ವರ್ಷಗಳಿಂದ ತರೀಕೆರೆ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 06-01-2022 ರಂದು ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದು ಪರಿಶೀಲನೆ ಮಾಡಿದ್ದೇನೆ. ಅದೇ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಬೆಳಗ್ಗೆ 11 ರಿಂದ 12 ರ ಮಧ್ಯೆದಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿದ್ದೇನೆ ಮತ್ತು ಆ ಸಮಯದಲ್ಲಿ ಭಾವ ಚಿತ್ರಗಳನ್ನು ತೆಗೆಸಿದ್ದೇನೆ. ಅದೇ ದಿನ ಠಾಣಾ ಆವರಣದಲ್ಲಿ ಅಪಘಾತದಲ್ಲಿ ಭಾಗಿಯಾದ ಟ್ರ್ಯಾಕ್ಟರನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 1.00 ಗಂಟೆಯವರೆಗೆ ಪಂಚನಾಮೆ ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಅಮಾನತುಪಡಿಸಿಕೊಂಡ ಬಗ್ಗೆ ಪಿಎಫ್ ಕೂಡಾ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-1 ರವರ ಮುಂದೂವರೆದ ಹೇಳಿಕೆ ಹಾಗೂ ಚಾಸಾ-2 ರವರ ಹೇಳಿಕೆ ದಾಖಲಿಸಿಕೊಂಡಿದ್ದೇನೆ. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-16 ರವರಿಗೆ ವಹಿಸಿಕೊಟ್ಟಿರುತ್ತೇನೆ. ಗುನ್ನಾ ಸ್ಥಳದ ಪಂಚನಾಮೆ ಮೇಲೆ ಇರುವ ಸಹಿ ಸಹಿಯನ್ನು ನಿಪಿ.1 ಸಿ ಎಂದು ಗುರುತಿಸಲಾಯಿತು. ಅಮಾನತು ಪಂಚನಾಮೆ ಮೇಲೆ ಇರುವ ಸಹಿಯನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆಸಿದ ಫೋಟೋಗಳಲ್ಲಿ ನಾನು ಕಾಣಿಸುತ್ತಿದ್ದೇನೆ. ಚಾಸಾ-2 ರವರು ನನ್ನ ಸಮಕ್ಷಮ ನಿಪಿ.6 ರಂತೆ ಹೇಳಿಕೆ ನೀಡಿದ್ದಾರೆ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:</u>**

ನಾನು ಯಾವುದೇ ಸ್ಥಳ ತನಿಖೆ ಅಥವಾ ಅಮಾನತು ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***